**SC No. 109/2016**
**P.W. 4**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 109/2016 P.W.4**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **06.03.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಆದೇಶ ದಿನಾಂಕ **06.01.2026** ರಂತೆ ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MG** ವಕೀಲರಿಂದ :</u>

2015 -2016 ರಲ್ಲಿ ಚಾಲಕ ವೃತ್ತಿ ಮಾಡುತ್ತಿದ್ದೆ. ನಾನು ಮಹಾವೀರ ಕಿಂಗ್ಸ್ ಅಪಾರ್ಟಮೆಂಟ್ ನಲ್ಲಿ ಚಾಲಕ ವೃತ್ತಿ ಮಾಡುತ್ತಿರಲಿಲ್ಲ ಎಂದರೆ ಸರಿ ಅಲ್ಲ. ನಾನು ಅಲ್ಲಿ ಮತ್ತು ಹೊರಗೆ ಸಹ ಚಾಲಕ ವೃತ್ತಿ ಮಾಡುತ್ತಿದ್ದೆ. ನಾನು ನಾನು ಮಹಾವೀರ ಕಿಂಗ್ಸ್ ಅಪಾರ್ಟಮೆಂಟ್ ನಲ್ಲಿ ಚಾಲಕ ಎಂದು ನೇಮಕ ವಾಗಿರಲಿಲ್ಲ. ಸದರಿ ಅಪಾರ್ಟಮೆಂಟ್ ನಲ್ಲಿ ಯಾರಿಗಾದರೂ ವಾಹನ ಚಾಲಕ ಬೇಕು ಎಂದು ನಾನು ಹೋಗುತ್ತಿದ್ದೆ. ಮೃತ ಕುಸುಮ ರಾಣಿ ನನ್ನನ್ನೂ ಯಾವತ್ತೂ ವಾಹನ ಚಾಲನೆ ಮಾಡಲು ಕರೆಯಿಸಿಲ್ಲ. ಅದೇ ರೀತಿ ನಿಧಿ ಶರ್ಮ ಸಹ ಯಾವತ್ತೂ ವಾಹನ ಚಾಲನೆ ಮಾಡಲು ಕರೆಯಿಸಿಲ್ಲ. ಕುಸುಮ ರಾಣಿ ಇದ್ದ ಅಪಾರ್ಟಮೆಂಟ್ 4 ನೇ ಅಂತಸ್ಥಿನಲ್ಲಿ ಇತ್ತು. ನನಗೆ ಆ ಅಪಾರ್ಟಮೆಂಟ್ ನಲ್ಲಿ ಕುಸುಮ ರಾಣಿ ಹಾಗೂ ನಿಧಿ ಶರ್ಮ ಇದ್ದ ಬಗ್ಗೆ ಗೊತ್ತಿರಲಿಲ್ಲ. ನಾನು ಆ ಅಪಾರ್ಟಮೆಂಟ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ವಾಸ ಇರಲಿಲ್ಲ. ನಾನು Entry Gate ನ Visitor Book ನಲ್ಲಿ ಸಹಿ ಮಾಡಿಲ್ಲ. ನಾನು ಮೊದಲು ಆ ಅಪಾರ್ಟಮೆಂಟ್ ನಲ್ಲಿ ಸೆಕ್ಯೂರಿಟಿ ಗಾರ್ಡ ಎಂದು ಕೆಲಸ ಮಾಡುತ್ತಿದ್ದು ಮತ್ತು ಬೇರೆ ಸೆಕ್ಯೂರಿಟಿರವರು ಪರಿಚಯ ಇದ್ದರಿಂದ ನಾನು Entry Gate ನಲ್ಲಿ ಇದ್ದ Visitor Book ಗೆ ಸಹಿ ಮಾಡುತ್ತಿರಲಿಲ್ಲ. ನಾನು ಯಾವಾಗ ಆ ಅಪಾರ್ಟಮೆಂಟ್ ಗೆ ಹೋದರೂ ಆ Visitor Book ಗೆ ಸಹಿ ಮಾಡುತ್ತಿರಲಿಲ್ಲ. ಗೋಪಾಲ್, ರಂಜೀತ್ ರವರುಗಳು ಮಹಾವೀರ ಅಪಾರ್ಟಮೆಂಟ್ ನಲ್ಲಿ 2015 – 2016 ರಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಪೊಲೀಸರು ಅವರನ್ನು ಕರೆ ತಂದು ಸಾಕ್ಷಿ ಮಾಡಿಸಿದ್ದಾರೆ ಎಂದರೆ ಸರಿ ಅಲ್ಲ. ನಾನು ಪಯನೀರ್ ಸೆಕ್ಯೂರಿಟಿ ಏಜೆನ್ಸಿ ಯಿಂದ ಮಹಾವೀರ ಕಿಂಗ್ಸ್ ಅಪಾರ್ಟಮೆಂಟ್ ನಲ್ಲಿ ಸೆಕ್ಯೂರಿಟಿ ಗಾರ್ಡ ಆಗಿ ಕೆಲಸಕ್ಕೆ ಸೇರಿಕೊಂಡಿದ್ದೆ. ಉಳಿದ ಸೆಕ್ಯೂರಿಟಿ ಗಾರ್ಡ ಗಳು ಪಯನೀರ್ ಸೆಕ್ಯೂರಿಟಿ ಏಜೆನ್ಸಿ ಯಿಂದ ನೇಮಕ ಗೊಂಡಿದ್ದರು. ಬೆಂಗಳೂರಿನಲ್ಲಿ ಪಯನೀರ್ ಸೆಕ್ಯೂರಿಟಿ ಏಜೆನ್ಸಿ ಎಂಬ ಯಾವುದೇ ಏಜೆನ್ಸಿ ಇರಲಿಲ್ಲ ಎಂದರೆ ಸರಿ ಅಲ್ಲ. ನಾನು ಆ ದಿನ ಆರೋಪಿ

ಅಪಾರ್ಟಮೆಂಟ್ ಒಳಗೆ ಬಂದಿದ್ದನ್ನು ಹಾಗೂ ಹೊರಗೆ ಹೋಗಿದ್ದನು ನಾನು ನೋಡಿಲ್ಲ. ನಿಧಿ ಶರ್ಮ ಕುಸುಮಾ ರಾಣಿ ಜೊತೆಗೆ ವಾಸ ಇದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ. ನಿಧಿ ಶರ್ಮ ಬಂದು ನಾವು ಸೆಕ್ಯೂರಿಟಿ ಗೇಟ್ ನಲ್ಲಿ ಕುಳಿತಿದ್ದಾಗ ಕುಸುಮಾ ರಾಣಿಗೆ ಏನೋ ತೊಂದರೆ ಆಗಿದೆ ಎಂದು ಹೇಳಿದರು. ನಿಧಿ ಶರ್ಮ ಅಪಾರ್ಟಮೆಂಟ್ ಒಳಗೆ ಹೋದ ಬಗ್ಗೆ ನನಗೆ ಏನು ಹೇಳಿರಲಿಲ್ಲ, ಆದರೆ ಆಕೆ ಬಾಗಿಲು ತೆಗೆದಾಗ ಚೇರ್ ಮತ್ತು ಇತರೇ ವಸ್ತುಳು ಚೆಲ್ಲಾಪಿಲ್ಲಿಯಾಗಿದ್ದು ಆ ಕಾರಣದಿಂದ ಬಂದು ನಮ್ಮನ್ನು ಕರೆದರು. ನಾನು ಯಾವತ್ತೂ ಆ ಅಪಾರ್ಟಮೆಂಟ್ ನಲ್ಲಿ ವಾಸ ಮಾಡಿಲ್ಲ. ನಾನು ನನ್ನ ಪಾಟೀ ಸವಾಲಿನಲ್ಲಿ ಆ ಅಪಾರ್ಟಮೆಂಟ್ ನಲ್ಲಿ ವಾಸ ಇದ್ದುದ್ದರಿಂದ ರಿಜಿಸ್ಟರ್ ನಲ್ಲಿ ಸಹಿ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುವುದಿಲ್ಲ. ನಾನು ಕೆಲವು ಸಲ ಸೆಕ್ಯೂರಿಟಿ ರೂಂ ನಲ್ಲಿ ಉಳಿದುಕೊಳ್ಳುತ್ತಿದ್ದೆ. ಕೆಲವು ಸೆಕ್ಯೂರಿಟಿ ಗಾರ್ಡ ಗಳು ಪಶ್ಚಿಮ ಬಂಗಾಳ ರಾಜ್ಯದವರು ಇದ್ದು ಅವರು ನನಗೆ ಪರಿಚಿತರು. ಆ ರೂಂ ನಲ್ಲಿ ನಾವು ಅಡುಗೆ ಮಾಡುಕೊಳ್ಳುತಿರಲಿಲ್ಲ ಹಾಗೂ Exit Gate ನ ಬಳಿ ಒಂದು ಮೇಸ್ ಇದ್ದು ಅಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಇತ್ತು. ಅಪಾರ್ಟಮೆಂಟ್ ನ ಹೊರೆಗೆ ಬೇರೆ ರೂಂ ನಲ್ಲಿ ನಾನು ವಾಸ ಇದ್ದೆ. ನಾನು ಕೆಲವು ಸಲ ಉಳಿದ ಸೆಕ್ಯೂರಿಟಿ ಗಾರ್ಡ ಜೊತೆಗೆ ಸೇರಿ ಮಧ್ಯಪಾನ ಮಾಡುತ್ತಿದ್ದೆ. ನಾನು ಶವವನ್ನು ನೋಡಿದಾಗ ಮೇಲುಮುಖವಾಗಿ ಇತ್ತು. ಲ್ಯಾಪ್ ಟಾಪ್ ವೈರ್ ಶವದ ಕುತ್ತಿಗೆಯಲ್ಲಿ ಸುತ್ತಿತ್ತು. ಶವದ ಅಕ್ಕಪಕ್ಕದಲ್ಲಿ ಕಬ್ಬಿಣದ ಚೇರ್ ಅನು ನಾನು ಗಮನಿಸಲಿಲ್ಲ. ನಾನು ಮಹಾವೀರ ಕಿಂಗ್ಸ್ ಅಪಾರ್ಟಮೆಂಟ್ ನಲ್ಲಿ ಯಾರಿಗೂ ಚಾಲಕ ವೃತ್ತಿ ಮಾಡುತ್ತಿರಲಿಲ್ಲ ಮತ್ತು ಪೊಲೀಸರು ನನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದಾರೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.